ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 13 ನೇ ಮಾರ್ಚ್, 2020

ಅನಧಿಕೃತ ಹೋಮ್‌ಸ್ಟೇ/ರೆಸಾರ್ಟ್‌ಗೆ ಅನುಮತಿ ನೀಡಿರುವ ಕುರಿತು

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

906 (931) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾರವಾರ ಜಿಲ್ಲೆಯ ಹಳಿಯಾಳ ಹಾಗೂ ಜೋಯಿಡಾ ತಾಲ್ಲೂಕಿನಲ್ಲಿ ಬಹಳಷ್ಟು ಹೋಮ್‌ಸ್ಟೇ ಹಾಗೂ ರೆಸಾರ್ಟ್‌ಗಳು ಅನಧಿಕೃತವಾಗಿ ತಲೆಯೆತ್ತಿದ್ದು, ಇದಕ್ಕೆ ಸಂಬಂಧಿಸಿದ ಅಧಿಕಾರಿಯು ಯಾವುದೇ ರೀತಿಯ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಸದರಿ ತಾಲ್ಲೂಕಿನಲ್ಲಿ ಎಷ್ಟು ಹೋಮ್‌ಸ್ಟೇ/ರೆಸಾರ್ಟ್‌ಗಳು ಇವೆ; ಇದರಲ್ಲಿ ಅಧಿಕೃತ ಹಾಗೂ ಅನಧಿಕೃತಗಳ ವಿವರ ನೀಡುವುದು; ಇದರ ಮಾಲೀಕರು ಯಾರು, ಅವರಿಗೆ ಪ್ರಾರಂಭ ಮಾಡಲು ಸಂಬಂಧಿಸಿದ ಇಲಾಖೆ ನೀಡಿರುವ ಎನ್.ಓ.ಸಿ. ಪತ್ರದ ವಿವರ ಹಾಗೂ ಸದರಿ ಹೋಮ್‌ಸ್ಟೇ/ರೆಸಾರ್ಟ್‌ಗಳು ಒಳಗೊಂಡಿರುವ ವಿಸ್ತೀರ್ಣ ಎಷ್ಟು ; ಮಾಹಿತಿ ಒದಗಿಸುವುದು ; (ಅಳತೆ ಪ್ರಕಾರ ವಿವರ, ಅರಣ್ಯ ಇಲಾಖೆ ಹಾಗೂ ಸಿ.ಟಿ. ಸರ್ವೆ ವರದಿ ಪ್ರಕಾರ ಅರಣ್ಯ ಇಲಾಖೆಯ ನಕಾಶೆ ಸಮೇತ ವರದಿ ಪ್ರತಿಯೊಂದು ಹೋಮ್‌ಸ್ಟೇ/ ರೆಸಾರ್ಟ್‌ಗಳ ವಿವರ ನೀಡುವುದು)

(ಇ) ಕಾನೂನು ಬಾಹಿರವಾಗಿ ನಡೆಸುತ್ತಿರುವ ಹೋಮ್‌ಸ್ಟೇ/ರೆಸಾರ್ಟ್‌ಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ; ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುವುದು ? (ಸಮಗ್ರ ವರದಿ ನೀಡುವುದು)